ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೬—೯೭ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 18.

ಮೃತಪಟ್ಟ ಶ್ರೀಕಂಠಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗೋರೀಬಿದನೂರಲ್ಲಿರುವ ಸ್ಕೂಲ್ ಹೆಡ್ ಮಾಸ್ಟರ್ ಕೆಲಸದಲ್ಲಿರುವ ಶೀತಾರಾಮಯ್ಯನವರು, ಮೃತಪಟ್ಟ ಸದರೀ ಶ್ರೀಕಂಠಯ್ಯನವರಿಗೆ ಮೊವ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ಶೀತಾರಾಮಯ್ಯನವರು, ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀತಾರಾಮಯ್ಯನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಅರ್ಜೀ ನಂಬರ್ 19.

ಮೃತಪಟ್ಟ ಮುನಿಶಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಗೊಲ್ಲರಪೇಟೆಗೆ ಕೇರಿದ ಹಳೇ ಅಕ್ಕಿಪೇಟೇಲಿರುವ ಸಿದ್ದರಾಮಂಣನವರು, ಮೃತಪಟ್ಟ ಸದರೀ ಮುನಿ ಶಾಮಪ್ಪನವರಿಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಸಿದ್ದರಾಮಂಣನವರು, ಹಳೇ ಅಕ್ಕೀಪೇಟೇ ವಾಸಸ್ಥರಾಗಿ ಮೃತಪಟ್ಟ ಮುನಿಶಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನೆ ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿದ್ದರಾಮಂಣನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಶಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.
ಸ್ ೧೮೯೬ನೇ ಇಸವಿ ಆಗಸ್ಟ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟ್ ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—೯೭ನೇ ಇಸವಿ ಮಿ|| ಅರ್ಜೀ ನಂಬರ್ 21.

ಮೃತಪಟ್ಟ ಫ್ರಾನ್ಸಿಸ್ ಗ್ರಿಗೂರಿ ಯಂಬುವರ ಆಸ್ತೀವಿಷಯದಲ್ಲಿ—

ಅರ್ಜೀದಾರ್ರು ಚನ್ನಪಟ್ಟಣದ ಕಸಬಾದಲ್ಲಿರುವ ಫ್ರಾನ್ಸಿಸ್ ಅಮೃತಪಿಳ್ಳೆ, ಮೃತಪಟ್ಟ ಸದರೀ ಫ್ರಾನ್ಸಿಸ್ ಗ್ರಿಗೂರೀರಿಗೆ ಅಂಣ ನು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಟಣದ ಸ್ಥಳದ ಫ್ರಾನ್ಸಿಸ್ ಅಮೃತಪಿಳ್ಳೆಯವರು, ಅರಸೀಕೆರೆ ವಾಸಸ್ಥರಾಗಿ ಮೃತಪಟ್ಟ ಫ್ರಾನ್ಸಿಸ್ ಗ್ರಿಗೂರೀರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಫ್ರಾನ್ಸಿಸ್ ಅಮೃತಪಿಳ್ಳೆಯವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಫ್ರಾನ್ಸಿಸ್ ಗ್ರಿಗೂರೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—೯೭ನೇ ಇಸವಿ ಮಿ|| ಅರ್ಜೀ ನಂಬರ್ 23.

ಮೃತಪಟ್ಟ ಬಿ. ಲಿಂಗಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಸಿವಿಲ್ ಮಿಲಿಟೆರೀ ಸ್ಟೇಷನ್ ಹಲಸೂರಿನಲ್ಲಿ ಇರುವ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯ, ಮೃತ ಪಟ್ಟ ಸದರೀ ಬಿ. ಲಿಂಗಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹಲಸೂರು ಸ್ಥಳದ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯನವರು, ಹಲಸೂರು ವಾಸಸ್ಥರಾಗಿ ಮೃತಪಟ್ಟ ಬಿ. ಲಿಂಗಯ್ಯನವರ ಜಿಂದಗಿ ಬಗ್ಯಾಗೆ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.
ಸದರೀ ದರಖಾಸ್ತುದಾರರಾದ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಬಿ. ಲಿಂಗಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.
ಸ್ ೧೮೯೬ನೇ ಇಸವಿ ಜುಲೈ ತಿಂಗಳ 29ನೇ ತಾರೀಖಿನಲ್ಲಿ ಕೋರ್ಟ್ ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

314

ಸ್ ೧೮೯೬—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 24.

ಮೃತಪಟ್ಟ ಶ್ರೀನಿವಾಸರಾಘವಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ದೇವರಾಜ ಮೊಹಲಾದಲ್ಲಿರುವ A. ಕೃಷ್ಣಯ್ಯಂಗಾರ್ರು, ಮೃತಪಟ್ಟ ಸದರೀ ಶ್ರೀನಿವಾಸರಾಘವಾಚಾರ್ಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರ್ ದೇವರಾಜ ಮೊಹಲಾ ಸ್ಥಳವ A. ಕೃಷ್ಣಯ್ಯಂಗಾರ್ರು, ಶ್ರೀರಂಗದ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸರಾಘವಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ A. ಕೃಷ್ಣಯ್ಯಂಗಾರ್ರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸರಾಘವಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 25.

ಮೃತಪಟ್ಟ ಕೃಷ್ಣಶಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಜೋರೀಪೇಟೆ ಕೃಷ್ಣಶಿಂಗರ ಬೀದಿಯಲ್ಲಿರುವ ಸುಬ್ಬಾಬಾಯಿಯು, ಮೃತಪಟ್ಟ ಸದರೀ ಕೃಷ್ಣಶಿಂಗರಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಸುಬ್ಬಾಬಾಯಿಯು, ಚನ್ನಪಟ್ಟಣ ವಾಸಸ್ಥರಾಗಿ ಮೃತಪಟ್ಟ ಕೃಷ್ಣಶಿಂಗರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಾಬಾಯಿಯ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಶಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಆಗಸ್ಟ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಗೆ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೮೯೫—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 421.

ಮೃತಪಟ್ಟ ದುರ್ಗಪ್ಪನವರ ಯಲ್ಲಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಅಕ್ಕಿಪೇಟೆಯಲ್ಲಿ ಇರುವ ಮರಿಯಪ್ಪನು, ಮೃತಪಟ್ಟ ಸದರೀ ದುರ್ಗಪ್ಪನವರ ಯಲ್ಲಪ್ಪನವರಿಗೆ ಭಾವಮೈದನನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಅಕ್ಕಿಪೇಟೆ ಸ್ಥಳದ ಮರಿಯಪ್ಪನು, ಬೆಂಗಳೂರು ಅಕ್ಕಿಪೇಟೇ ವಾಸಸ್ಥರಾಗಿ ಮೃತಪಟ್ಟ ದುರ್ಗಪ್ಪನವರ ಯಲ್ಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಯಪ್ಪನವರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಜುಲೈ ತಿಂಗಳ 29ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಗೆ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮರ್ಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಪ್ರಾಯಿಷಾಗಿರುವ ಅದೇ ಇಸವಿ ಜನವರಿ 23ನೇ ಮರ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್ದಾರ್ ಮತ್ತು ಸರ್ಕಲ್ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.